**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 10-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 867/2015

CW-7 PW-3

| | | |
|---|---|---|
| ಸಾಕ್ಷಿದಾರರ ಹೆಸರು | - | ಇರ್ಷಾದ ಅಬ್ದುಲ ರೆಹಮಾನ ಸೌದಾಗರ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ಎ ಎಸ್ ಐ |
| ಸಾಕೀನ | - | ಗೋಕಾಕ |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2010 ರಿಂದ 2018 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 24-12-2012 ರಂದು ನಾನು ಠಾಣೆಯಲ್ಲಿದ್ದಾಗ ಮದ್ಯಾಹ್ನ 3-00 ಗಂಟೆಗೆ ಚಾಸಾ 1 ರವರು ತಮಗೆ ಬಂದ ಮಾಹಿತಿಯ ಮೇರೆಗೆ ದಾಳಿ ಮಾಡಲು ಹೋಗಬೇಕಾಗಿದೆ ಎಂದು ತಿಳಿಸಿದ್ದು, ಸಂಜೆ 4-00 ಗಂಟೆಗೆ ಚಾಸಾ 1 ರವರು ನನ್ನನ್ನು, ಚಾಸಾ 4, 5,6,8 ಮತ್ತು 9 ರವರನ್ನು ಹಾಗೂ ಪಂಚರವನ್ನು ಬರಮಾಡಿಕೊಂಡು ಸಂಗೋಳ್ಳಿ ರಾಯಣ್ಣಾ ವೃತ್ತದ ಹತ್ತಿರ ಇರುವ ಲಕ್ಷ್ಮಿ ಲಾಡ್ಜಗೆ ಹೋಗಿ ದಾಳಿ ಮಾಡಿದ್ದು, ಮೊದಲ ಅಂತಸ್ತಿನಲ್ಲಿ ಕೌಂಟರ ಹತ್ತಿರ ನಿಂತಿದ್ದ ವ್ಯಕ್ತಿಯನ್ನು ವಿಚಾರಿಸಲಾಗಿ ಅವರ ಹೆಸರು ಸಂಜಯ ಮಲ್ಲಪ್ಪಾ ಗೌಡರ ಎಂದು ತಿಳಿಸಿದ್ದು, ನಂತರ ಸದರಿ ಅಂತಸ್ತನ್ನು ಪರಿಶೀಲಿಸಿ, ಅಲ್ಲಿ ಏನು ಸಿಗದ ಕಾರಣ ಎರಡನೇ ಅಂತಸಿ2ಗೆ ಹೋಗಿ ಪರಿಶೀಲಿಸಿದಾಗ ಕೋಣೆ ನಂಬರ 13

ರಲ್ಲಿ ಇಬ್ಬರು ವ್ಯಕ್ತಿಗಳು ಸಿಕ್ಕಿದ್ದು ಅವರನ್ನು ವಿಚಾರಿಸಲಾಗಿ ಮಲ್ಲಿಕಾರ್ಜುನ ದಾನಪ್ಪಗೋಳ, ನಾಗನೂರ ವಾಸಿ, ಮತ್ತು ನಮ್ಮ ಚಾಸಾ 5 ರವರು ಇನ್ನೊಬ್ಬ ಮಹಿಳೆಯನ್ನು ವಿಚಾರಿಸಲಾಗಿ ಅವರು ಭಾಗ್ಯಶ್ರೀ ಕಾಳಣ್ಣವರ ನಾಗನೂರ ವಾಸಿ ಎಂದು ತಿಳಿದು ಬಂದಿದ್ದು, ಸದರಿ ಮಹಿಳೆ ಸದರಿ ಮಲ್ಲಿಕಾರ್ಜುನ ದಾನಪ್ಪಗೋಳ ರೂ. 500/- ಕೊಟ್ಟು ವೇಶ್ಯಾವಾಟಿಕೆಗಾಗಿ ಕರೆದುಕೊಂಡು ಬಂದಿರುವುದಾಗಿ ತಿಳಿಸಿದಳು. ಸದರಿ ಮಲ್ಲಿಕಾರ್ಜುನ ದಾನಪ್ಪಗೋಳ ಅವರ ಅಂಗಜಪ್ತಿ ಮಾಡಿದಾಗ ರೂ. 500/- ಹಾಗೂ ರೂ. 500/- ಬೆಲೆಯ ಸ್ಯಾಮಸಂಗ ಮೋಬೈಲ ದೊರೆತಿದ್ದು, ಲಾಡ್ಜನ ರಜಿಸ್ಟರ ಪುಸ್ತಕವನ್ನು ಜಪ್ತ ಮಾಡಿ ಲಾಡ್ಜ ಮಾಲೀಕ 1 ನೇ ಆರೋಪಿ ಹಾಗೂ ಸದರಿ ಮಲ್ಲಿಕಾರ್ಜುನ ದಾನಪ್ಪಗೋಳ ರವರನ್ನು ದಸ್ತಗೀರ ಮಾಡಿ 4-30 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ. ಚಾಸಾ 1 ರವರು ದೂರು ದಾಖಲಿಸಿ ಮುಂದಿನ ಕ್ರಮ ಕೈಗೊಂಡು ಮತ್ತು ಅದೇ ದಿನ ನಾನು ಚಾಸಾ 11 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1) ನಾವು ಠಾಣೆಯಿಂದ ಏಳು ಜನರು ದಾಳಿಗೆ ಹೋಗಿದ್ದೇವು. ಚಾಸಾ 2 ಮತ್ತು 3 ರವರನ್ನು ನಮ್ಮ ಸಿಬ್ಬಂದಿಗಳಲ್ಲಿ ಯಾರು ಕರೆದುಕೊಂಡು ಬಂದಿದ್ದರು ನನಗೆ ಗೊತ್ತಿಲ್ಲ, ಆದರೆ ಅವರನ್ನು ಠಾಣೆಗೆ ಕರೆದುಕೊಂಡುಬಂದಿದ್ದರು. ಅವರನ್ನು ಸಹ ನಮ್ಮ ಜೊತೆ ಕರೆದುಕೊಂಡು ಹೋಗಿದ್ದೇವು. ಸದರಿ ಪಂಚರ ಜೊತೆ ನಾವೆಲ್ಲರೂ ಸೇರಿ ಒಟ್ಟು 10 ಜನರು ಇದ್ದೇವು ಎಂದರೆ ನನಗೆ ನೆನಪಿಲ್ಲ. ನಾವು ದಾಳಿಗೆ ಹೋಗಿದ್ದ ವಾಹನ ಎಷ್ಟು ಆಸನಗಳನ್ನು ಒಳಗೊಂಡಿತ್ತು ನನಗೆ ನೆನಪಿಲ್ಲ. ಠಾಣೆಯಿಂದ ಸದರಿ ಲಾಡ್ಜ ಸುಮಾರು 200 ಮೀ. ಅಂತರದಲ್ಲಿರುತ್ತದೆ. ನಾವು ದಾಳಿ ಮಾಡಿದಾಗ ಎರಡನೇ ಅಂತಸ್ತಿನ 13 ನೇ ಸಂಖ್ಯೆ ಕೋಣೆಗೆ ನೇರವಾಗಿ ಹೋಗಿದ್ದು ಆ ಕೋಣೆ ಮಾತ್ರ ಮುಚ್ಚಿದ್ದು, ಉಳಿದ ಕೋಣೆಗಳ ಬಾಗಿಲುಗಳನ್ನು ತೆಗೆದಿದ್ದರಿಂದ ಆ ಕೋಣೆಗೆ

ಮಾತ್ರ ನೇರವಾಗಿ ಹೋಗಿ ದಾಳಿ ಮಾಡಿರುತ್ತೇವೆ. ಈ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಸದರಿ ವಿಷಯವನ್ನು ಹೇಳಲು ತೊಂದರೆ ಇರಲಿಲ್ಲ. ನನ್ನ ಹೇಳಿಕೆಯಲ್ಲಿ ಈ ಮೇಲೆ ಹೇಳಿದಂತೆ 2ನೇ ಆರೋಪಿಯಾಗಿದ್ದ ಮಲ್ಲಿಕಾರ್ಜುನ ರೂ. 500/- ಗಳಿಗೆಚಾಸಾ 10 ರವರನ್ನು ಕರೆದುಕೊಂಡು ಬಂದಿದ್ದ ಬಗ್ಗೆ ಹೇಳಿರುತ್ತೇನೆ. ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 10 ರವರಿಗೆ ಸದರಿ ಮಲ್ಲಿಕಾರ್ಜುನ ರೂ. 500/- ಗಳನ್ನು ಕೊಟ್ಟ ಬಗ್ಗೆ ಚಾಸಾ 1 ರವರು ವಿಚಾರಿಸಿದ್ದು ನಾನು ಕೇಳಿರುವುದಿಲ್ಲ. ಚಾಸಾ 10 ರವರ ಅಂಗಜಪ್ತಿಯನ್ನು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯ ಲಾಡ್ಜ ನಮ್ಮ ಠಾಣೆಯ ಹತ್ತಿರ ಇರುವುದರಿಂದ ನಮಗೆ ಬೇಕಾದಾಗ ಪುಕ್ಕಟ್ಟೆಯಾಗಿ ನೀಡದ ಕಾರಣ ಅವರ ವಿರುದ್ಧ ಖೊಟ್ಟಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 1 ರವರು ಪ್ರಕರಣಕ್ಕೆ ಅನುಕೂಲವಾಗುವಂತೆ ಹೇಳಿದಂತೆ ನಾನು ಹೇಳಿಕೆ ನೀಡಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.